# 2014-15 ನೇ ಸಾಲಿನ ಜಿಲ್ಲಾ ವಲಯ "ರೈತರಿಗೆ ಸಹಾಯ" (ಡಿ-08) ಯೋಜನೆ ಅನುಷ್ಠಾನದ ಮಾರ್ಗಸೂಚಿಗಳು:-

**I.ಯೋಜನೆಯ ಹೆಸರು : ಜಿಲ್ಲಾವಲಯ"ರೈತರಿಗೆ ಸಹಾಯ" (ಡಿ-08)**

**ಲೆಕ್ಕ ಶೀರ್ಷಿಕೆ: 2435-00-101-0-62**

## II. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಆಯಾ ಪ್ರದೇಶಕ್ಕೆ ಸೂಕ್ತವಾದ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು, ತಾಲ್ಲೂಕು / ಹೋಬಳಿ ಮಟ್ಟದಲ್ಲಿ ಪರಿಸರವನ್ನು ಸುಂದರಗೊಳಿಸುವುದು ಹಾಗೂ ಕ್ಷೇತ್ರ ಮಟ್ಟದಲ್ಲಿ ಆಯಾ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ / ರೋಗಗಳ ನಿವಾರಣೆಗಾಗಿ ಸಸ್ಯ ಸಂರಕ್ಷಣೆ ಔಷಧಿಗಳಿಗೆ ರೈತರಿಗೆ ಸಹಾಯಧನ ನೀಡುವ ಸಲುವಾಗಿ ಜಿಲ್ಲಾವಲಯದಡಿ ಈ ಯೋಜನೆಯನ್ನು ರೂಪಿಸಲಾಗಿದೆ. ಕಳೆದ ಹಲವು ವರ್ಷಗಳಿಂದ ಈ ಯೋಜನೆಯಡಿ ನಾಲ್ಕು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2014-15ನೇ ಸಾಲಿನಲ್ಲಿಯೂ ಸಹ ಸದರಿ ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನವನ್ನು ಮುಂದುವರಿಸಲಾಗಿದೆ.

## III. ಯೋಜನೆಯ ಉದ್ದೇಶಗಳು:

- ಹಣ್ಣಿನ ಮತ್ತು ಇತರೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಕಸಿ / ಸಸಿಗಳನ್ನು ಫಲಾನುಭವಿ ರೈತರಿಗೆ ವಿತರಿಸಿ, ಭೂಮಿಯಲ್ಲಿ ನಾಟಿ ಮಾಡಿಸುವುದರ ಮೂಲಕ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಪ್ರದೇಶವನ್ನು ಹೆಚ್ಚಿಸುವುದು.
- ಸಾಮಾಜಿಕ ತೋಟಗಾರಿಕೆಗೆ ಒತ್ತು ನೀಡುವುದರ ಮೂಲಕ ಪರಿಸರ / ವನ ಸಂಪತ್ತನ್ನು ಹೆಚ್ಚಿಸುವುದು.
- ಅಲಂಕಾರಿಕ ಗಿಡಗಳನ್ನು ತೋಟಗಾರಿಕೆ ಇಲಾಖೆ ವತಿಯಿಂದ ಅಭಿವೃದ್ಧಿ ಪಡಿಸಿ ಸರ್ಕಾರಿ ಕಛೇರಿ / ಅತಿಥಿ ಗೃಹಗಳ ಮುಂದಿಡಲು ವಿತರಿಸುವುದರ ಮೂಲಕ ಸುಂದರ ಪರಿಸರ ಕಲ್ಪಿಸುವುದು.
- ಕ್ಷೇತ್ರ ಮಟ್ಟದಲ್ಲಿ ಆಯಾ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ / ರೋಗ ಬಾಧೆಯನ್ನು ನಿವಾರಿಸಲು ಉಪಯೋಗಿಸುವ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಸಹಾಯಧನ ನೀಡುವುದರ ಮೂಲಕ ಸೂಕ್ತ ಸಂರಕ್ಷಣಾ ಪದ್ಧತಿಗಳನ್ನು ನಿಗದಿತ ಸಮಯದಲ್ಲಿ ಅಳವಡಿಸಲು ರೈತರಿಗೆ ಉತ್ತೇಜನ ನೀಡುವುದು ಹಾಗೂ ತನ್ಮೂಲಕ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು.

## IV. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:

- ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ
- ಸಾಮಾಜಿಕ ತೋಟಗಾರಿಕೆ
- ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ
- ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ

## V.ಅನುದಾನ ಮತ್ತು ಸಹಾಯಧನ :

**ರೈತರಿಗೆ ಸಹಾಯ (D-08)** (ಲೆಕ್ಕ ಶೀರ್ಷಿಕೆ: 2435-00-101-0-62) ಯೋಜನೆಯು ಜಿಲ್ಲಾವಲಯ ಯೋಜನೆಯಾಗಿದ್ದು, 2014-15ನೇ ಸಾಲಿನಲ್ಲಿ ಒಟ್ಟು ವಾರ್ಷಿಕ ಅನುದಾನ **ರೂ.200.87** ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ಎಲ್ಲಾ 30 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**<u>ಸಹಾಯಧನ:</u>**

**ಅ) <u>ಪ್ರದೇಶ ವಿಸ್ತರಣೆ ಕಾರ್ಯಕ್ರಮ:</u>**

ಆಯಾ ಪ್ರದೇಶಕ್ಕೆ ಸೂಕ್ತವಾದ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಪ್ರತಿ ಫಲಾನುಭವಿಗೆ ಗರಿಷ್ಠ ಒಂದು ಎಕರೆಗೆ ಗರಿಷ್ಠ ರೂ.1000/- ಗಳಿಗೆ ಸರಿದೂಗುವಂತೆ ಕಸಿ/ಸಸಿಗಳನ್ನು ಸಹಾಯಧನ ರೂಪದಲ್ಲಿ ನೀಡುವುದು.

**ಆ) <u>ಸಾಮಾಜಿಕ ತೋಟಗಾರಿಕೆ:</u>**

ಈ ಕಾರ್ಯಕ್ರಮವನ್ನು ಸಮುದಾಯ ಭೂಮಿಯಲ್ಲಿ / ಶಾಲಾ ಆವರಣದಲ್ಲಿ / ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ಪರಿಸರ ಸಂಪತ್ತನ್ನು ಕಿರು ತೋಟ ನಿರ್ಮಿಸುವ ಮೂಲಕ ಹೆಚ್ಚಿಸುವುದು. ಈ ಯೋಜನಾ ಕಾರ್ಯಕ್ರಮ ರೈತ / ಫಲಾನುಭವಿ ಆಧಾರಿತ ಕಾರ್ಯಕ್ರಮವಾಗಿರುವುದಿಲ್ಲ.

**ಇ) <u>ಸರ್ಕಾರಿ ಕಛೇರಿ / ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ:</u>**

ಈ ಕಾರ್ಯಕ್ರಮದಡಿ ಜಿಲ್ಲಾ / ತಾಲ್ಲೂಕು ಮಟ್ಟದ ತೋಟಗಾರಿಕೆ ಸಸ್ಯಾಗಾರಗಳಲ್ಲಿ ಅಲಂಕಾಲರಿಕ ಗಿಡಗಳ ಅಭಿವೃದ್ಧಿಗೆ ಅನುದಾನವನ್ನು ಕಲ್ಪಿಸಲಾಗಿದೆ.

**ಈ) <u>ಸಸ್ಯ ಸಂರಕ್ಷಣೆ:</u>**

ಈ ಕಾರ್ಯಕ್ರಮದಡಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ತೋಟಗಾರಿಕೆ ರೈತರಿಗೆ ಶೇ.50 ರಂತೆ ಗರಿಷ್ಠ ರೂ.2000/- ಪ್ರತಿ ಹೆಕ್ಟೇರ್ ಗೆ ಸಹಾಯಧನವನ್ನು ನೀಡುವುದು.

**VI. <u>ತಾಂತ್ರಿಕ ವೈಶಿಷ್ಟತೆಗಳು:</u>**

**ಅ) <u>ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ :</u>**

- ಫಲಾನುಭವಿಗಳ ಆಯ್ಕೆಯು 2014-15ನೇ ಸಾಲಿನ ಜುಲೈ 15 ರ ಒಳಗಾಗಿ ಪೂರ್ಣಗೊಳಿಸಿ, ಅಕ್ಟೋಬರ್ 15 ರ ಒಳಗಾಗಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.
- ಇಲಾಖೆಯಲ್ಲಿ ಉತ್ಪಾದಿಸಿದ ವಿವಿಧ ಹಣ್ಣಿನ ಗಿಡಗಳ ಸುಧಾರಿತ ತಳಿ/ಸಂಕರಣ ತಳಿಗಳನ್ನು **<u>ಅಥವಾ</u>** ಆಯಾ ಭಾಗಗಳಿಗೆ ಸರಿ ಹೊಂದುವ ಇತರ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಸಸ್ಯಗಳನ್ನು ರೈತರಿಗೆ ವಿತರಿಸಿ, ಅವರು ತೋಟ ನಿರ್ಮಿಸಲು ತಾಂತ್ರಿಕ ಮಾಹಿತಿ ನೀಡುವುದು.
- ತೋಟಗಾರಿಕೆ ಇಲಾಖಾ ಕ್ಷೇತ್ರಗಳಲ್ಲಿ ಉತ್ಪಾದಿಸಿದ ಸಸ್ಯ ಸಾಮಗ್ರಿಗಳನ್ನು ಖರೀದಿಸಿ, ಈ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
- ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ನೆಡುವುದಕ್ಕೆ ಸೂಕ್ತವಾದ ಋತುಮಾನಕ್ಕನುಸಾರವಾಗಿಯೇ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

**ಆ) <u>ಸಾಮಾಜಿಕ ತೋಟಗಾರಿಕೆ :</u>**

- ಸಮುದಾಯ ಭೂಮಿಯಲ್ಲಿ ಶಾಲಾ ಆವರಣದಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ನೀರಿನ ಸೌಲಭ್ಯಗಳನ್ನಾಧರಿಸಿ, ಪರಿಸರ/ವನ ಸಂಪತ್ತು ಹೆಚ್ಚಿಸಲು ಹಣ್ಣಿನ ಕಸಿ/ಸಸಿ **<u>ಅಥವಾ</u>** ಇತರ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಗಿಡಗಳನ್ನು ವಿತರಿಸಿ ಕಿರು ತೋಟ ನಿರ್ಮಿಸಲು ಕ್ರಮ ವಹಿಸುವುದು.

**ಇ) <u>ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ :</u>**

- ಆಕರ್ಷಣೀಯವಾದ ವಿವಿಧ ಅಲಂಕಾರಿಕ ಗಿಡಗಳನ್ನು 9", 12", 14" ಮಣ್ಣಿನ ಕುಂಡ **ಅಥವಾ** 18" ಮಣ್ಣಿನ / ಸಿಮೆಂಟ್ ಕುಂಡಗಳಲ್ಲಿ ವೃದ್ಧಿಪಡಿಸಬೇಕು. ತೀರಾ ವಿಶಿಷ್ಟ ಸನ್ನಿವೇಶಗಳಲ್ಲಿ ಮಾತ್ರ, ಅಗತ್ಯವಿದ್ದಲ್ಲಿ ಸಿಮೆಂಟ್ / ಪ್ಲಾಸ್ಟಿಕ್ ಕುಂಡಗಳಲ್ಲಿ ಬೆಳೆಸಬಹುದು.
- ಪ್ರತಿ ಗಿಡದ ಉತ್ಪಾದನೆ ಮತ್ತು ಇತರ ವೆಚ್ಚ ಗರಿಷ್ಠ ರೂ.75/- ಇದ್ದು, **ರೂ.20/- ವೆಚ್ಚದ ಗಿಡಗಳನ್ನು** 9" ರಿಂದ 12" ಅಳತೆಯ ಕುಂಡಗಳಲ್ಲಿ, **ರೂ.30/- ವೆಚ್ಚದ ಗಿಡಗಳನ್ನು 12" ರಿಂದ 14" ಅಳತೆಯ ಕುಂಡಗಳಲ್ಲಿ** ಮತ್ತು **ರೂ.50/- ರಿಂದ ರೂ.75/- ವೆಚ್ಚದ ಗಿಡಗಳನ್ನು 18" ಮಣ್ಣಿನ ಕುಂಡ ಅಥವಾ ಸಿಮೆಂಟ್ ಕುಂಡಗಳಲ್ಲಿ ವೃದ್ಧಿಪಡಿಸತಕ್ಕದ್ದು.**
- ಬೇರು ಬಿಟ್ಟ ಕಡ್ಡಿ/ಗೂಟಿಯ ಅಲಂಕಾರಿಕ ಗಿಡಗಳನ್ನು ಕುಂಡಗಳಲ್ಲಿ ನಾಟಿ ಮಾಡಿ, ಗಿಡ ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದ ನಂತರವೇ ವಿತರಿಸಲು ಕ್ರಮವಹಿಸುವುದು.
- **ಕುಂಡಗಳಲ್ಲಿರುವ ಅಲಂಕಾರಿಕ ಗಿಡಗಳನ್ನು ಖಾಸಗಿಯವರಿಂದ ಖರೀದಿಸಿ ವಿತರಿಸಬಾರದು. ಇಲಾಖೆಯಲ್ಲಿಯೇ ಉತ್ಪಾದಿಸುವುದು.**

**ಈ) <u>ಸಸ್ಯ ಸಂರಕ್ಷಣೆ:</u>**

- ವಿವಿಧ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿ (ಜೈವಿಕ ಪೀಡೆನಾಶಕಗಳು, ಫಿರ್‌ಮೋನ್ ಟ್ರಾಪ್ಸ್, ರಾಸಾಯನಿಕ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತ ಫಲಾನುಭವಿಗಳಿಗೆ, ರೈತರಿಗೆ ಸಹಾಯ (D-08) ಯೋಜನೆಯಡಿ ಸಹಾಯಧನವನ್ನು ನೀಡಲು ಕ್ರಮ ವಹಿಸುವುದು.
- ಸಸ್ಯ ಸಂರಕ್ಷಣಾ ಔಷಧಿಗಳನ್ನು ಕೃಷಿ ವಿಶ್ವವಿದ್ಯಾನಿಲಯದ (ಬೆಂಗಳೂರು/ ಧಾರವಾಡ) ವಿಜ್ಞಾನಿಗಳು ಸುಧಾರಿತ ಬೇಸಾಯ ಕ್ರಮಗಳಲ್ಲಿ ಸೂಚಿಸಿರುವಂತೆ ನಿಗದಿತ ಪ್ರಮಾಣದಲ್ಲಿ ಉಪಯೋಗಿಸುವಂತೆ ರೈತರಿಗೆ ಮಾರ್ಗದರ್ಶನವನ್ನು ನೀಡುವುದು.ಈ ಮೂಲಕ ತೋಟಗಾರಿಕೆ ಬೆಳೆಗಳ ಗುಣಮಟ್ಟ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು

## VII. <u>ಫಲಾನುಭವಿಗಳ ಅರ್ಹತೆ:</u>

1) ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ (Joint Ownership), ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ **<u>ಅಥವಾ</u>** ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ,ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.

2) ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

3) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು **ಅಥವಾ** ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.

4) ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ **ಸಾಮಾನ್ಯ,ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ /ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.** ನಿಯಮಾನುಸಾರ ಪರಿಶಿಷ್ಟ **ಜಾತಿ ವರ್ಗದವರಿಗೆ (SC)** ಒಟ್ಟು **ಅನುದಾನದ ಕನಿಷ್ಟ ಶೇ.16.25%ರಷ್ಟು ಮೀಸಲಿಡಬೇಕು. ಪರಿಶಿಷ್ಟ- ಪಂಗಡದವರಿಗೆ (ST)** ಒಟ್ಟು ಅನುದಾನದ **ಕನಿಷ್ಟ ಶೇ.6.55%ರಷ್ಟು ಮೀಸಲಿಡಬೇಕು. ಸಣ್ಣ, ಅತೀ ಸಣ್ಣ ರೈತರು ಮತ್ತು ರೈತ ಮಹಿಳೆಯರಿಗೆ ಕನಿಷ್ಟ ಶೇ.33%ರಷ್ಟು ಅನುದಾನ ಮೀಸಲಿಡಬೇಕು.**

5) **ಸಾಮಾಜಿಕ ತೋಟಗಾರಿಕೆ:** ಈ ಘಟಕ ಕಾರ್ಯಕ್ರಮದಡಿ ಸೌಲಭ್ಯವನ್ನು ಪಡೆಯಲು ಭೂಮಿ ಹೊಂದಿರುವ ಸಮುದಾಯ ಸಂಸ್ಥೆ, ಶಾಲೆಗಳು, ಸರ್ಕಾರಿ ಸಂಸ್ಥೆಗಳು ಅರ್ಹರಿರುತ್ತಾರೆ.

## VIII. ಅರ್ಜಿಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-

1) ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು "ರೈತರಿಗೆ ಸಹಾಯ" ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗದಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಅಹ್ವಾನಿಸುವುದು.

2) ಅಧಿಸೂಚನೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.

3) ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು /ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ) ಕಛೇರಿಗೆ ಸಲ್ಲಿಸುವುದು.

   a. ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ(ದ್ವಿ ಪ್ರತಿಯಲ್ಲಿ) .
   b. ಪಹಣಿ (RTC) (ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು).
   c. ರೈತರ ಬ್ಯಾಂಕ್ ಖಾತೆಯುಳ್ಳ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.

4) ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು /ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ) ರವರು ಅರ್ಜಿ ಹಾಗೂ ಮೇಲ್ಕಂಡ ಎರಡು ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸುವುದು. ದಾಖಲಾತಿಗಳನ್ನು

ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆ MPIC ಮಿತಿಯಲ್ಲಿ ಜೇಷ್ಠತಾ ಪಟ್ಟಿಯ ಅನುಸಾರ ಕಾಂಪೋನೆಂಟ್ ಅನುಷ್ಠಾನಕ್ಕೆ ಕ್ರಮ ವಹಿಸುವುದು.

ಸದರಿ ವರಧಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ಹಾಗೂ ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ)/ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ), ರವರ ದೃಡೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು (5 ದಿನಗಳೊಳಗಾಗಿ).

ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನಕ್ಕಾಗಿ ಅರ್ಜಿ ಮತ್ತು ದಾಖಲಾತಿಗಳನ್ನು ನಿಗದಿತ ದಿನಾಂಕದೊಳಗೆ ಕಡ್ಡಾಯವಾಗಿ ವ್ಯಾಟ್ ಸಂಖ್ಯೆ / ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಬಿಲ್‌ನೊಂದಿಗೆ ಸಲ್ಲಿಸುವುದು.

ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ತಾಕು ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ಪರಿಶೀಲಿಸಿದ ತಾಕುಗಳ **ಪೈಕಿ ಕನಿಷ್ಟ ಶೇ.50 ರಷ್ಟು** ತಾಕುಗಳನ್ನು ತಾಲ್ಲೂಕು ಸಹಾಯಕ ತೋಟಗಾರಿಕೆ ನಿರ್ದೇಶಕರು / ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ), ರವರು ಪರಿಶೀಲಿಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು. ಜಿಲ್ಲೆಯ ತೋಉನಿ (ಜಿಪಂ) ರವರು **ಶೇ.10 ರಷ್ಟು** ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಸಹಾಯಕ ತೋಟಗಾರಿಕೆ ನಿರ್ದೇಶಕರು / ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ತಾಲ್ಲೂಕು ಸಹಾಯಕ ತೋಟಗಾರಿಕೆ ನಿರ್ದೇಶಕರು / ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ) ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರಧಿ ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು **ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ GPS enabled photos ಅನ್ನು ತೆಗೆದು ಇಲಾಖೆಯ websiteನಲ್ಲಿ upload ಮಾಡುವುದು.**

5) ರೈತರು ಭೂಮಿಯನ್ನು ಹೊಂದಿರುವುದಕ್ಕೆ ಪಹಣಿಯಲ್ಲಿ ನಮೂದಿಸಿರಬೇಕು. ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೆ ಇರುವ ಪಕ್ಷದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ಯಿಂದ ಬೆಳೆಯನ್ನು ಧೃಡೀಕರಿಸಿದ ಅರ್ಜಿಗಳನ್ನು ಸಹಾಯಧನ ಲೆಕ್ಕಾಚಾರ ಮಾಡಲು ಪರಿಗಣಿಸುವುದು.

6) **ಸಸ್ಯ ಸಂರಕ್ಷಣೆ:**

- ಸಹಾಯಧನವನ್ನು ನೀಡಲು ರೈತ ಫಲಾನುಭವಿಯಿಂದ **ಅನುಬಂಧ** ರಲ್ಲಿನ ನಮೂನೆಯ ಅರ್ಜಿಯ ಜೊತೆಗೆ RTC, ಬೆಳೆ ದೃಡೀಕರಣವನ್ನು ಹಾಗೂ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ಬಿಲ್ಲುಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯು ಪಡೆಯುವುದು.
- ಸದರಿ ಯೋಜನೆಯಡಿ ರೈತರು ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗಳ ಬಿಲ್ಲುಗಳಿಗೆ ಕಡ್ಡಾಯವಾಗಿ TIN ಸಂಖ್ಯೆ ಇರಬೇಕು.

- ಪ್ರೋತ್ಸಾಹಧನವನ್ನು ನೀಡುವಾಗ ರೈತರಿಂದ **<u>ಅನುಬಂಧ</u>** ರಲ್ಲಿ ತಿಳಿಸಿರುವಂತೆ ಬೇಡಿಕೆ ಪತ್ರ ಹಾಗು ಸ್ವಯಂ ಘೋಷಿತ ಪತ್ರ (Self Claim Bills )ಅನ್ನು ಪಡೆದುಕೊಂಡು, ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ದೃಡೀಕರಿಸುವುದು.

## IX. <u>ತಾಂತ್ರಿಕ ಪರಿಶೀಲನಾ ಕ್ರಮಗಳು :-</u>

ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ), ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿ ಮಾರ್ಗಸೂಚಿಗಳನ್ವಯ ಈ ಯೋಜನೆಯ ಘಟಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.

## X. <u>ನಿರ್ದೇಶನಾಲಯದ ಅನುಮೋದನೆ:-</u>

ಆಯಾ ಜಿಲ್ಲೆಗೆ ಸಂಬಂಧಿಸಿದಂತೆ, MPIC ಗೆ ನಿರ್ದೇಶನಾಲಯದಿಂದ ಅನುಮೋದನೆ ಪಡೆದ ನಂತರ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.

## XI.<u>ಸಹಾಯಧನ ವಿತರಣೆ:</u>

ಈ ಯೋಜನೆಯಡಿ, **<u>ಪ್ರದೇಶ ವಿಸ್ತರಣೆ ಕಾರ್ಯಕ್ರಮ</u>** ಮತ್ತು **<u>ಸಸ್ಯ ಸಂರಕ್ಷಣೆ ಕಾಂಪೋನೆಂಟ್‌ಗಳು ರೈತರ ಫಲಾನುಭವಿ ಆಧಾರಿತ ಕಾಂಪೋನೆಂಟ್‌ಗಳಾಗಿದ್ದು,</u>** ಮೇಲಿನ ಕ್ರಮ ಸಂಖ್ಯೆ (V) ರಲ್ಲಿ ಹಾಗೂ ಈ ಕೆಳಗೆ ವಿವರಿಸಿದಂತೆ ಅರ್ಹ ರೈತ ಫಲಾನುಭವಿಗಳು ನಿಯಮಾನುಸಾರ ಸಹಾಯಧನವನ್ನು ವಿತರಿಸುವುದು.

### ಅ) <u>ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ :</u>

- ಪ್ರತಿ ಫಲಾನುಭವಿಗೆ ಗರಿಷ್ಠ ಒಂದು ಎಕರೆ ಪ್ರದೇಶಕ್ಕೆ ಸರಿದೂಗುವಂತೆ ಹಣ್ಣಿನ ಗಿಡಗಳ ಅಥವಾ ಇತರೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಗಿಡಗಳ ಪೂರೈಕೆ ಮಾಡಬೇಕು.
- ಪ್ರತಿ ಫಲಾನುಭವಿಗೆ ನೀಡುವ ಸೌಲಭ್ಯದ ಗರಿಷ್ಠ ಘಟಕ ವೆಚ್ಚ ರೂ.1000/- ಒಂದು ಎಕರೆಗೆ (ರೂ.ಒಂದು ಸಾವಿರ ಮಾತ್ರ), ಯಾವುದೇ ಕಾರಣಕ್ಕೂ ಮೀರಬಾರದು.
- ಫಲಾನುಭವಿಗಳ ಪಟ್ಟಿಯು ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯತಿ ಸದಸ್ಯರುಗಳ ಶಿಫಾರಸನ್ನು ಒಳಗೊಂಡಿರಬೇಕು. **ಅಥವಾ** ಪ್ರಸಕ್ತ ಯಾವ ಅಧಿಕೃತ ವಿಧಿ-ವಿಧಾನದಿಂದ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತಿದೆಯೋ, ಆ ವಿಧಾನವನ್ನು ಅನುಸರಿಸತಕ್ಕದ್ದು.

### ಆ) <u>ಸಾಮಾಜಿಕ ತೋಟಗಾರಿಕೆ :</u>

- ಭೂಮಿ ಹೊಂದಿದ ಸಮುದಾಯ ಸಂಸ್ಥೆ/ಶಾಲೆಗಳಲ್ಲಿ ಗಿಡ ನೆಡಲು ಗುಂಡಿಗಳನ್ನು ತೆಗೆಸುವ ಹಾಗೂ ಗಿಡಗಳನ್ನು ಅವರೇ ನಾಟಿ ಮಾಡಿಕೊಳ್ಳಲು ಸಿದ್ದತೆ ಮಾಡಿಕೊಳ್ಳುವ ಪ್ರೇರಣೆ ಮಾಡಿ, ಯೋಜನೆಯಲ್ಲಿ ಹೆಚ್ಚಿನ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಕಸಿ/ಸಸಿಗಳನ್ನು ವಿತರಿಸಲು ತಾಲ್ಲೂಕು ಅಧಿಕಾರಿಗಳು ಕ್ರಮವಹಿಸುವುದು.

**ಇ) <u>ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ :</u>**

- ಕುಂಡಗಳಲ್ಲಿ ಬೆಳೆಸಿದ ಅಲಂಕಾರಿಕ ಗಿಡಗಳನ್ನು ಆಯಾ ತಾಲ್ಲೂಕುಗಳಲ್ಲಿನ ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ವಿತರಿಸಿ, ದಾಖಲಾತಿ ಪುಸ್ತಕದಲ್ಲಿ ಈ ಬಗ್ಗೆ ಪೂರ್ಣ ಮಾಹಿತಿ ಇಡತಕ್ಕದ್ದು.
- ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆದೇಶದಂತೆ ಅನುಮೋದನೆ ಪಡೆದು ಉದ್ಯಾನವನಗಳನ್ನು ನಿರ್ಮಿಸುವುದು, ಇತ್ಯಾದಿ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು.

**ಈ) <u>ಸಸ್ಯ ಸಂರಕ್ಷಣೆ:</u>**

- ತೋಟಗಾರಿಕೆ ಬೆಳೆಗಳನ್ನು ಬೆಳೆದಂತಹ ರೈತ ಫಲಾನುಭವಿಗಳು ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ.50 ರಂತೆ ಗರಿಷ್ಠ ರೂ.2000/-ಪ್ರತಿ ಹೆಕ್ಟೇರ್ ಗೆ ಸಹಾಯಧನವನ್ನು ನೀಡುವುದು.

## XII.<u>ಅನುದಾನ ವಿನಿಯೋಗ ಪ್ರಮುಖಾಂಶಗಳು:-</u>

- ಎಲ್ಲಾ ಜಿಲ್ಲಾವಲಯದ ಫಲಾನುಭವಿ ಆಧಾರಿತ ಯೋಜನೆಯಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಸದಸ್ಯರ ಶಿಫಾರಸ್ಸುಗಳಿಗೆ ಆದ್ಯತೆ ನೀಡುವುದು, ಹಾಗೂ ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಕಡ್ಡಾಯವಾಗಿ ಅನುಮೋದನೆ ಪಡೆದಿರಬೇಕು, ಈ ಯೋಜನೆಯಡಿ ಆಯಾ ತಾಲ್ಲೂಕಿಗೆ ಅಗ ್ತ್ಯವಿರುವ ಕಾಂಪೋನೆಂಟ್‌ಗಳನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಗೆ ಅಗತ್ಯವಿದ್ದಲ್ಲಿ ತಾಲ್ಲೂಕು / ಜಿಲ್ಲಾ ಪಂಚಾಯತ್ ಅನುಮೋದನೆ ಪಡೆಯತಕ್ಕದ್ದು.
- ಯೋಜನೆಗಳ ಸೌಲಭ್ಯದ ಬಗ್ಗೆ ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿ ಸದಸ್ಯರು/ಶಾಸಕರು ರವರ ಗಮನಕ್ಕೆ ತಾಲ್ಲೂಕು ಅಧಿಕಾರಿಗಳೇ ತರುವುದು.
- ಯೋಜನೆಯ ಸೌಲಭ್ಯಗಳಾದ ಗಿಡ/ಗೊಬ್ಬರ/ಔಷಧಿಗಳನ್ನು ಫಲಾನುಭವಿಗಳಿಗೆ ವಿತರಿಸುವಾಗ ಸಣ್ಣ-ಪುಟ್ಟ ಸರಳ ಸಮಾರಂಭಗಳನ್ನು ಮಾಡಿ, ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನಿಸಿ, ಅವರ ಸಮಕ್ಷಮದಲ್ಲಿ ವಿತರಿಸಿ, ಸೌಲಭ್ಯ ವಿತರಣಾ ಪುಸ್ತಕದಲ್ಲಿ ದಾಖಲಿಸಿ, ಆಹ್ವಾನಿತ ಪ್ರತಿನಿಧಿಗಳ ಸಹಿ ಪಡೆಯಬೇಕು.
- ಈ ಯೋಜನೆಯ, ಮೇಲೆ ವಿವರಿಸಿರುವ ಎರಡು ಕಾಂಪೋನೆಂಟ್‌ಗಳಾದ ಪ್ರದೇಶ ವಿಸ್ತರಣೆ ಹಾಗೂ ಸಾಮಾಜಿಕ ತೋಟಗಾರಿಕೆ ವಿತರಿಸಬೇಕಾದ ಸೌಲಭ್ಯಗಳನ್ನು ಪರಿಕರಗಳಾದ ಸಸ್ಯಗಿ ಳು, ಇತ್ಯಾದಿಗಳ ರೂಪದಲ್ಲಿ ಮಾತ್ರ ಫಲಾನುಭವಿಗಳಿಗೆ ವಿತರಿಸಬೇಕು. ಯಾವುದೇ ಕಾರಣಕ್ಕೂ ನಗದು / ಚೆಕ್ಕು / ಡಿ.ಡಿ ರೂಪದಲ್ಲಿ ವಿತರಿಸಬಾರದು.
- ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ, ಕಸಿ/ಸಸಿಗಳನ್ನು ಯಾವುದೇ ಕಾರಣಕ್ಕೂ ಖಾಸಗಿ ಯವರಿಂದ ಖರೀದಿಸಬಾರದು. **<u>ಇಲಾಖಾ ನರ್ಸರಿಗಳಲ್ಲಿ ಲಭ್ಯವಿರುವ</u>** ಸಸ್ಯ ಸಾಮಾಗ್ರಿಗಳನ್ನು ಮಾತ್ರ ಖರೀದಿಸಿ ಬಳಸುವುದು.

- ಈ ಎಲ್ಲಾ ಘಟಕ ಕಾರ್ಯಕ್ರಮಗಳನ್ನು ನಿಯಮಾನುಸಾರ ಹಾಗೂ ಅನುಮೋದಿತ MPIC ಪ್ರಕಾರ ಅನುಷ್ಠಾನಗೊಳಿಸಿ ಯಶಸ್ವಿಗೊಳಿಸುವುದು. ನಿರ್ದಿಷ್ಟ ಋತುಮಾನಗಳಲ್ಲಿಯೇ ಈ ಯೋಜನೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

## XIII. ಅನುಷ್ಠಾನ ವೇಳಾಪಟ್ಟಿ:

1) ಯೋಜನೆಗೆ ನಿಗಧಿಪಡಿಸಿದ ಅನುಷ್ಠಾನದ ವೇಳಾಪಟ್ಟಿಯಂತೆ (ಅನುಬಂಧಿಸಿದೆ) ಮತ್ತು ಅನುಮೋದಿತ MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.

## XIV. ಅನುಬಂಧಗಳು:

1) ಕ್ರಿಯಾ ಯೋಜನೆ-2014-15 (Link Document)
2) ಪ್ರತಿ ಮಾಹೆಯ ಪ್ರಗತಿ ವರದಿ ಸಲ್ಲಿಸುವ ನಮೂನೆ:
3) ಅನುಷ್ಠಾನದ ವೇಳಾ ಪಟ್ಟಿ

## XVI. ಆರ್ಥಿಕ ಪ್ರತ್ಯಾಯೋಜನೆ ( Delegation of Power) :

ಈ ಯೋಜನೆಯನ್ನು ಸರ್ಕಾರದ ಆರ್ಥಿಕ ಪ್ರತ್ಯಾಯೋಜನೆ (Delegation of Power) ಪ್ರಕಾರ ನಿಯಮಾನುಸಾರ ಮಂಜೂರಾತಿಯನ್ನು ಆಯಾ ಅಧಿಕಾರಿಗಳ (ತಾಲ್ಲೂಕು / ಜಿಲ್ಲೆಯ) **ಆರ್ಥಿಕ ಮಿತಿಯೊಳಗೆ** ಮಂಜೂರಾತಿಯನ್ನು ನೀಡಿ, ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗಿ ೊಳಿಸತಕ್ಕದ್ದು.

## XVII. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇಮೇಲ್ ಮೂಲಕ **ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ** ಸಲ್ಲಿಸುವುದು. (ಸಮಸ್ಯೆ ಇದ್ದಲ್ಲಿ, **ಶ್ರೀ ಅನಂತ ಮೂರ್ತಿ, ಸಹಾಯಕ ತೋಟಗಾರಿಕೆ ನಿರ್ದೇಶಕರು ಕಂಪ್ಯೂಟರ್ ಸೆಂಟರ್,ಲಾಲ್ ಬಾಗ್** ರವರನ್ನು ಸಂಪರ್ಕಿಸುವುದು).
2. ಎಲ್ಲಾ ಫಲಾನುಭವಿಗಳನ್ನೊಳಗೊಂಡ **ಜಿಪಿಎಸ್ ಪೋಟ್‌ಗಳನ್ನು** ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೇ ತೋಟಗಾರಿಕೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸುವುದು. (ಸಮಸ್ಯೆ ಇದ್ದಲ್ಲಿ, **ಶ್ರೀ ಅನಂತ ಮೂರ್ತಿ, ಸಹಾಯಕ ತೋಟಗಾರಿಕೆ ನಿರ್ದೇಶಕರು ಕಂಪ್ಯೂಟರ್ ಸೆಂಟರ್ ಲಾಲ್‌ಬಾಗ್** ರವರನ್ನು ಸಂಪರ್ಕಿಸುವುದು).
3. ಅಂತಿಮ ಪ್ರಗತಿ ವರದಿ,ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಹಾರ್ಡ್ ಕಾಪಿಯೊಂದಿಗೆ ತೋಟಗಾರಿಕೆ ಅಪರ ನಿರ್ದೇಶಕರು(ಹಣ್ಣುಗಳು) ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.